# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಮಹಿಳಾ ಕಲ್ಯಾಣ

### ಅಪರೆಲ್ ತರಬೇತಿ ಮತ್ತು ವಿನ್ಯಾಸ ಕೇಂದ್ರಗಳನ್ನು ಪ್ರಾರಂಭಿಸುವುದು – ಮಾರ್ಗಸೂಚಿಗಳು

**A. ಕಾರ್ಯಕ್ರಮದ ಉದ್ದೇಶ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಳೆಯ ನೂರು ವಾರ್ಡ್‌ಗಳಲ್ಲಿ ಸುಮಾರು 300 ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಮಹಿಳಾ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 6ರಿಂದ 12 ತಿಂಗಳ ತರಬೇತಿ ನೀಡಿ, ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಫಲಾನುಭವಿಗಳಿಗೆ ಉಚಿತ ಹೊಲಿಗೆ ಯಂತ್ರಗಳನ್ನು/ಶಿಷ್ಯ ವೇತನವನ್ನು ನೀಡಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣಾರ್ಥಿಗಳು ಸಿದ್ದ ಉಡುಪು ತಯಾರಿಕ ಘಟಕಕ್ಕೆ ಸಂಬಂಧಿಸಿದಂತೆ, ತರಬೇತಿ ಅಗತ್ಯವಿದೆ ಎಂದು ತಿಳಿಸಿರುತ್ತಾರೆ. ಅಲ್ಲದೆ ಉದ್ಯೋಗ ಕಲ್ಪಿಸುವ ತರಬೇತಿ ನೀಡಿದಲ್ಲಿ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಜೀವನ ನಡೆಸಲು ಅನುಕೂಲವಾಗುತ್ತದೆ ಎಂದು ತಿಳಿದು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ A.T.D.C. ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

**B. ಕಾರ್ಯಕ್ರಮದ ವಿವರಣೆ:–**

ಭಾರತ ಸರ್ಕಾರ, ಜವಳಿ ಮಂತ್ರಾಲಯದ ಪ್ರಾಯೋಜಿತ ಸಂಸ್ಥೆಯಾದ A.P.E.C. (Apparel Promotion Export Council) ಇದರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ A.T.D.C. (Apparel Training and Design Centre) ಸಂಸ್ಥೆಯ ಸಹಯೋಗದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜಂಟಿಯಾಗಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ತರಬೇತಿ ಕೇಂದ್ರಗಳಿಗೆ ಪಾಲಿಕೆಯಿಂದ ನಿಯೋಜಿತ ಅಭ್ಯರ್ಥಿಗಳಿಗೆ ಆಧುನಿಕ ತಂತ್ರಜ್ಞಾನ ತರಬೇತಿ ನೀಡಿ, ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಉಡುಪು ಉತ್ಪಾದನಾ ಘಟಕದಲ್ಲಿ ಉದ್ಯೋಗ ಒದಗಿಸುವುದು, ಅಲ್ಲದೆ ಸ್ವಯಂ ಉದ್ಯೋಗ ಬಯಸುವ ಅಭ್ಯರ್ಥಿಗಳಿಗೆ ಘಟಕ ಸ್ಥಾಪಿಸಲು ಸಹಕರಿಸಲಾಗುವುದು.

A.T.D.C. ಸಿದ್ದ ಉಡುಪು ತಯಾರಿಕಾ ತರಬೇತಿಗಳಲ್ಲಿ ಒಂದು ತಿಂಗಳ ಅವಧಿಯಿಂದ ಹನ್ನೆರಡು ತಿಂಗಳ ಅವಧಿಯ ತರಬೇತಿ ಕಾರ್ಯಕ್ರಮಗಳನ್ನು ಅಳವಡಿಸಲಾಗಿರುತ್ತದೆ. ಈ ತರಬೇತಿ ಕೇಂದ್ರಗಳಿಗೆ ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಆಗಿರುತ್ತದೆ.

ಪ್ರತಿ ವಲಯದಲ್ಲಿ ಒಂದೊಂದು A.T.D.C. ತರಬೇತಿ ಕೇಂದ್ರವನ್ನು ಪ್ರಾರಂಭಿಸಿ ನಡೆಸಲಾಗುವುದು.

**2ನೇ ಪುಟಕ್ಕೆ ---**

## C. ಅರ್ಹತೆಗಳು:–

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.

ಆ) ಈ ಯೋಜನೆಯಲ್ಲಿ ಮಹಿಳೆಯರಿಗೆ ಮಾತ್ರ ತರಬೇತಿ ನೀಡಲಾಗುವುದು.

ಇ) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

ಈ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ವಯೋಮಿತ 18 ರಿಂದ 40 ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ 18 ರಿಂದ 35ರ ಒಳಗಿರಬೇಕು.

ಉ) ಅಭ್ಯರ್ಥಿಗಳ ವಿದ್ಯಾರ್ಹತೆ ಕನಿಷ್ಠ 8ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಊ) ನಿರ್ಗತಿಕ ಹಾಗೂ ವಿದವೆಯರಿಗೆ ಆದ್ಯತೆ ನೀಡಲಾಗುವುದು.

ಋ) ತರಬೇತುದಾರರು ತರಬೇತಿಗಳಿಗೆ ಗೈರು ಹಾಜರಿ ಅಥವಾ ತರಬೇತಿಯನ್ನು ಅಪೂರ್ಣಗೊಳಿಸುವ ಬಗ್ಗೆ ಬಿಳಿಯ ಹಾಳೆಯಲ್ಲಿ 2 ಸಾಕ್ಷಿಗಳೊಂದಿಗೆ ಸ್ವಯಂ ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.

ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ಏ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.

ಐ) ಹಿಂದುಳಿದ ವರ್ಗದವರ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.1.00 ಲಕ್ಷದೊಳಗೆ ಇರಬೇಕು.

ಒ) ಅಲ್ಪ ಸಂಖ್ಯಾತ ವರ್ಗದವರಿಗೆ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.2.00 ಲಕ್ಷದೊಳಗೆ ಇರಬೇಕು.

ಓ) ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ,ವಲಯ ಕಛೇರಿಯ ರಿಜಿಸ್ಟರ್, ವಸತಿ ಶಾಲೆಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

## D. ಆಯ್ಕೆ ವಿಧಾನ:–

ಅ) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು.

ಆ) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

ಇ) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

**3ನೇ ಪುಟಕ್ಕೆ ---**

ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ವಲಯದ ಕಲ್ಯಾಣಾಧಿಕಾರಿ | – | ಸದಸ್ಯರು |
| 5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು | – | ಸದಸ್ಯ ಕಾರ್ಯದರ್ಶಿ |
| 6. ಇಲಾಖಾ ಪ್ರತಿನಿಧಿ | | |

ಉ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

ಊ) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

ಋ) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

ಎ) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆ ಚಟುವಟಿಕೆಗಳು

## ಮಹಿಳಾ ಕಲ್ಯಾಣ ಕಾರ್ಯಕ್ರಮಗಳು

**ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಸಹಾಯ ಧನ –ಮಾರ್ಗಸೂಚಿಗಳು**

**Financial Assistance to Women's Self help Groups for Self Employment -Guidelines**

**(i) ಕಾರ್ಯಕ್ರಮದ ಉದ್ದೇಶ:**

ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಸ್ವಾವಲಂಬಿಗಳಾಗಲು ಸ್ತ್ರೀ ಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದ ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸ್ವಂತ ಉದ್ಯೋಗಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಹಾಯಧನವನ್ನು ನೀಡಲು ಉದ್ದೇಶಿಸಲಾಗಿದೆ.

**(ii) ಕಾರ್ಯಕ್ರಮದ ವಿವರಣೆ:**

ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ವರ್ಗಕ್ಕೆ ಸೇರಿದ ಕೊಳಚೆ ಪ್ರದೇಶಗಳು/ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಾಲೋನಿಗಳಲ್ಲಿ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅಸಂಘಟಿತ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಮಹಿಳೆಯರಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸ್ತ್ರೀ ಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದ ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸ್ವಂತ ಉದ್ಯೋಗಕ್ಕಾಗಿ ಎನ್.ಎಸ್.ಸಿ.ಎಫ್.ಡಿ.ಸಿ/ಮಹಿಳಾ ಅಭಿವೃದ್ಧಿ ನಿಗಮ/ಡಿ.ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಪರಿಶಿಷ್ಠ ಪಂಗಡದ ಅಭಿವೃದ್ಧಿ ನಿಗಮ ನಿಯಮಿತ/ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಇತರೆ ಸಂಬಂಧಪಟ್ಟ ಅಭಿವೃದ್ಧಿ/ನಿಗಮ/ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ಮಹಿಳಾ ಸ್ವಸಹಾಯ ಸಂಸ್ಥೆಗಳಿಗೆ ರೂ.10,000/– ರಿಂದ ರೂ.20,000/–ಗಳ ಸಹಾಯ ಧನವನ್ನು ಬಿಡುಗಡೆ ಮಾಡಲಾಗುವುದು.

**(iii) ಅರ್ಹತೆಗಳು:**

a. ಸ್ವಸಹಾಯ ಸಂಘಗಳ ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಚುನಾಯಿತ ಜನಪ್ರತಿನಿಧಿಗಳ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರವನ್ನು ಸಲ್ಲಿಸಬಹುದಾಗಿದೆ. ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

**2ನೇ ಪುಟಕ್ಕೆ---**

b. ಸ್ವಸಹಾಯ ಸಂಘವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು.

c. ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗಿರುವರಿಗೆ ಈ ಹಿಂದೆ ಆದಾಯ ಜಾತಿ ಹಾಗೂ ವಯೋಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ. ಇದನ್ನು ಪರಿಷ್ಕರಿಸಿ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ನಿಯಮದಡಿ ಸ್ಥಾಪಿಸಲಾದ ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗಿರುವ ಸದಸ್ಯರು ಬಿ.ಪಿ.ಎಲ್ ಕುಟುಂಬದವರಾಗಿದ್ದು, ಇದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಪಡೆಯತಕ್ಕದು. ಸದರಿಯವರು 18 ರಿಂದ 60 ವರ್ಷದೊಳಗಿರಬೇಕು.

d. ಸ್ವಸಹಾಯ ಸಂಘಗಳ ಸದಸ್ಯರು ಇತ್ತೀಚಿನ 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

e. ಈ ಯೋಜನೆಯ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಹಿಂದೆ ಯಾವುದೇ ಸರ್ಕಾರ/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹಾಗೂ ನಿಗಮಗಳಿಂದ ಸಹಾಯ ಧನವನ್ನು/ ಸವಲತ್ತುಗಳನ್ನು ಪಡೆದಿರುವುದಿಲ್ಲ ಎಂಬುದರ ಬಗ್ಗೆ ರೂ.20/–ಗಳ ಛಾಪಾಕಾಗದದಲ್ಲಿ ದೃಢೀಕರಣವನ್ನು ಸಂಬಂಧಪಟ್ಟ ಸಂಸ್ಥೆ ವತಿಯಿಂದ ಪಡೆದು ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಈ ರೀತಿಯ ಸೌಲಭ್ಯ ಪಡೆದಿರುವವರು ಸೌಲಭ್ಯ ಪಡೆಯಲು ಅರ್ಹರಾಗಿರುವುದಿಲ್ಲ.

f. ಸಂಬಂಧಪಟ್ಟ ಸಂಸ್ಥೆ/ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ನಂತರ ಫಲಾನುಭವಿಗಳಿಗೆ ಸಹಾಯ ಧನ ಗರಿಷ್ಠ ರೂ.20,000/–ಗಳನ್ನು ಸ್ತ್ರೀ ಶಕ್ತಿ ಸಂಘಗಳಿಗೆ ಬಿಡುಗಡೆ ಮಾಡಲಾಗುವುದು.

g. ಸಹಾಯ ಧನ ಪಡೆದ ಫಲಾನುಭವಿಗಳು ಸಾಲವನ್ನು ಮರುಪಾವತಿ ಮಾಡುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು.

**(iv) <u>ಆಯ್ಕೆ ವಿಧಾನ:</u>**

a. ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗುವುದು.
b. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ವರ್ಗಕ್ಕೆ ಸೇರಿದ ಕೊಳಚೆ ಪ್ರದೇಶಗಳು/ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಾಲೋನಿಗಳಲ್ಲಿ ರಚಿಸಿರುವ ಸ್ವಸಹಾಯ ಸಂಘಗಳ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

**3ನೇ ಪುಟಕ್ಕೆ–––**

c. ಈ ಕೆಳಕಂಡ ಹಿರಿಯ ಅಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಖಾಂತರ ಸ್ವಸಹಾಯ ಸಂಘಗಳನ್ನು ಗುರುತಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಒಬ್ಬರು ಪ್ರತಿ ನಿಧಿ | – | ಸದಸ್ಯರು |
| 4. ಸಾಲ ಮಂಜೂರು ಮಾಡಿದ ನಿಗಮದ/ಬ್ಯಾಂಕ್ ಓರ್ವ ಪ್ರತಿ ನಿಧಿ | – | ಸದಸ್ಯರು |
| 5. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು | – | ಸದಸ್ಯರು |
| 6. ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯ ಸಮುದಾಯ ವ್ಯವಹಾರಗಳ ಅಧಿಕಾರಿ | – | ಸದಸ್ಯರು |
| 7. ವಲಯ ಸಹಾಯಕ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

d. ಆಯ್ಕೆ ಸಮಿತಿಯಿಂದ ಸ್ವಸಹಾಯ ಸಂಘಗಳ ಆಯ್ಕೆ ಪೂರ್ಣಗೊಳಿಸುವುದು.

ವಿಶೇಷ / ಅಪರ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## <u>ಮಹಿಳಾ ಕಲ್ಯಾಣ</u>

### <u>ನ್ಯಾಷನಲ್ ಇಸ್ಟಿಟ್ಯೂಟ್ ಆಫ್ ಫ್ಯಾಷನ್ ಡಿಸೈನಿಂಗ್ ಟೆಕ್ನಾಲಜಿ ತರಬೇತಿ ಕಾರ್ಯಕ್ರಮಗಳ – ಮಾರ್ಗಸೂಚಿಗಳು</u>

**<u>೦. ಕಾರ್ಯಕ್ರಮದ ಉದ್ದೇಶ:–</u>**

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಆಧುನಿಕ ಸಿದ್ದ ಉಡುಪುಗಳ ಹಾಗೂ ಫ್ಯಾಷನ್ ಡಿಸೈನಿಂಗ್ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಮಹಿಳೆಯರಿಗೆ ವೃತ್ತಿ ತರಬೇತಿ ನೀಡುವುದು. ಸದರಿಯವರಿಗೆ ಉದ್ಯೋಗ ನೀಡುವುದು ಹಾಗೂ ಸ್ವಉದ್ಯೋಗ ಕಲ್ಪಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ದಿ ಹೊಂದುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**<u>೭. ಕಾರ್ಯಕ್ರಮದ ವಿವರಣೆ:–</u>**

ಭಾರತ ಸರ್ಕಾರದ ಸ್ವಾಮ್ಯದ ನ್ಯಾಷನಲ್ ಇನ್ಸ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ತರಬೇತಿ ಸಂಸ್ಥೆಯು ಬೆಂಗಳೂರಿನ ಹೆಚ್.ಎಸ್.ಆರ್.ಬಡಾವಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಯಲ್ಲಿ ಒಂದು ತಿಂಗಳ ಅವಧಿಯ ತರಬೇತಿಯಿಂದ ಪದವಿಮುಟ್ಟದವರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ತರಬೇತಿ ಸಂಸ್ಥೆಗೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನಿಯೋಜಿಸಲಾಗುತ್ತಿದೆ.

ಸದರಿ ತರಬೇತಿ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲು ವಲಯಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ತರಬೇತಿ ಸಂಸ್ಥೆಗೆ ಸಂದರ್ಶನಕ್ಕೆ ಕಳುಹಿಸಿಕೊಡಬಹುದಾಗಿದೆ. ಒಂದುವರೆ ತಿಂಗಳ ಅವಧಿಯ ತರಬೇತಿಗೆ ಅಂದಾಜು 5,000/– ಗಳಿಂದ 25,000/– ರೂಗಳ ತರಬೇತಿ ಶುಲ್ಕ ಹಾಗೂ 6 ತಿಂಗಳ ಅವಧಿಯಿಂದ 1 ವರ್ಷದವರೆಗೆ ರೂ.30,000/–ಗಳಿಂದ 65,000/– ರೂಗಳ ವರೆಗೆ ತರಬೇತಿ ಶುಲ್ಕ ಇರುತ್ತದೆ. ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಂದ ತರಬೇತಿ ಶುಲ್ಕವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಾವತಿಸಲಾಗುವುದು.

ತರಬೇತಿ ಕಾರ್ಯಕ್ರಮಗಳು **ಪ್ರತಿವರ್ಷ ಜುಲೈ ಮಾಹೆಯಲ್ಲಿ** ಪ್ರಾರಂಭವಾಗುವುದು. ಸದರಿ ತರಬೇತಿ ಕಾರ್ಯಕ್ರಮಗಳಿಗೆ ಸಂಸ್ಥೆ ವತಿಯಿಂದ ಸಾರ್ವಜನಿಕ ಪ್ರಕಟಣೆ ನೀಡುವರು ಇದೇ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಕಛೇರಿಗಳು ಸಹ ಪ್ರಕಟಣೆ ಹೊರಡಿಸಿ, ಅಭ್ಯರ್ಥಿಗಳಿಂದ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ಸ್ವೀಕರಿಸಿ ಸಂದರ್ಶನಕ್ಕೆ ಸಂಸ್ಥೆಗೆ ಕಳುಹಿಸಿಕೊಡಬಹುದಾಗಿದೆ.

**2ನೇ ಪುಟಕ್ಕೆ ---**

**ಅ. ಅರ್ಹತೆಗಳು:-**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.

ಆ) ಈ ಯೋಜನೆಯಲ್ಲಿ ಮಹಿಳೆಯರಿಗೆ ಮಾತ್ರ ತರಬೇತಿ ನೀಡಲಾಗುವುದು.

ಇ) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

ಈ) ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ತರಬೇತಿ ಸಂಸ್ಥೆಯವರು ನಿಗಧಿಪಡಿಸಿರುವಂತೆ ಕನಿಷ್ಠ ವಯೋಮಿತಿ 18 ಆಗಿರಬೇಕು.

ಉ) ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಇಂಗ್ಲೀಷ್ ಭಾಷೆ ಕಡ್ಡಾಯವಾಗಿ ಕಲಿತಿರಬೇಕು.

ಊ) ನಿರ್ಗತಿಕ ಹಾಗೂ ವಿದವೆಯರಿಗೆ ಆದ್ಯತೆ ನೀಡಲಾಗುವುದು.

ಋ) ತರಬೇತುದಾರರು ತರಬೇತಿಗಳಿಗೆ ಗೈರು ಹಾಜರಿ ಅಥವಾ ತರಬೇತಿಯನ್ನು ಅಪೂರ್ಣಗೊಳಿಸುವ ಬಗ್ಗೆ ಬಿಳಿಯ ಹಾಳೆಯಲ್ಲಿ 2 ಸಾಕ್ಷಿಗಳೊಂದಿಗೆ ಸ್ವಯಂ ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.

ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಜಾತಿ ಹಾಗೂ ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ಏ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.

ಐ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ 1.00 ಲಕ್ಷ ವಾರ್ಷಿಕ ಆದಾಯದ ಮಿತಿಯಲ್ಲಿರಬೇಕು. ಸಂಬಂಧಪಟ್ಟ ತಹಶೀಲ್ದಾರ್ ಕಛೇರಿಗಳಿಂದ ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿರಬೇಕು.

ಒ) ಹಿಂದುಳಿದ ಹಾಗೂ ಇತರೆ ವರ್ಗದವರಿಗೆ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.1.00 ಲಕ್ಷದೊಳಗೆ ಇರಬೇಕು.

ಓ) ಅಲ್ಪ ಸಂಖ್ಯಾತ ವರ್ಗದವರಿಗೆ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.2.00 ಲಕ್ಷದೊಳಗೆ ಇರಬೇಕು.

ಔ) ಅರ್ಜಿದಾರರು 3 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

**ಆ. ಆಯ್ಕೆ ವಿಧಾನ:-**

ಅ) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು.

ಆ) ಆಯಾಯ ವಲಯಗಳಿಗೆ ನಿಗಧಿಪಡಿಸಿರುವ ಗುರಿಯಂತೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದಾಗಿದೆ.

**3ನೇ ಪುಟಕ್ಕೆ ---**

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ವಲಯ ಅಪರ/ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ – ಸದಸ್ಯರು
4. ವಲಯದ ಕಲ್ಯಾಣಾಧಿಕಾರಿ – ಸದಸ್ಯರು
5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ

ಉ) ಮೇಲ್ಕಂಡ ಸಮಿತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ತರಬೇತಿ ಸಂಸ್ಥೆಗೆ ಸಂದರ್ಶನಕ್ಕೆ ಕಳುಹಿಸಿಕೊಡತಕ್ಕದ್ದು.

ಊ) ಸದರಿ ಸಂಸ್ಥೆಯ ಸಂದರ್ಶನದಲ್ಲಿ ಆಯ್ಕೆಯಾಗಿ ತರಬೇತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ನಿಯಮಾನುಸಾರ ತರಬೇತಿ ಶುಲ್ಕವನ್ನು ಪಾವತಿಸತಕ್ಕದ್ದು.

ಋ) ಹೆಚ್ಚಿನ ಮಾಹಿತಿಗಾಗಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಸಂಸ್ಥೆ ಓಖಈಖ ಅಚಿಟೂಥ ಅ.ಂ. ಖೂಾಜ ಓಔ21, 27ಣು ಒಚಿಟಿ, ಖಱಞಣಡಿ – 01, ಊಖು ಐಚಿಥಿಠಣ, (ಊಥಾಡಿ –ಖಚಿಡಿರಿಚಿರಿಣಡಿಚಿ ಖಔಚಿಜ) ಃಚಿಟಿಔಚಿಟಡಿಜ – 34, ಈ. ಓಔ25632550 ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ/ವಲಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

## ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸ್ವಂತ ಉದ್ಯೋಗಕ್ಕಾಗಿ ಆರ್ಥಿಕ ಸಹಾಯ ಮಾಡುವ ಯೋಜನೆ (ಮಹಿಳಾ ಕಲ್ಯಾಣ)–ಮಾರ್ಗಸೂಚಿಗಳು

## Financial Assistance to Women's Self help Groups for Self Employment Scheme-Guidelines

**(v) ಕಾರ್ಯಕ್ರಮದ ಉದ್ದೇಶ:**

ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಸ್ವಾವಲಂಬಿಗಳಾಗಲು ಸ್ತ್ರೀ ಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದ ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸ್ವಂತ ಉದ್ಯೋಗಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಹಾಯಧನವನ್ನು ನೀಡಲು ಉದ್ದೇಶಿಸಲಾಗಿದೆ.

**(vi) ಕಾರ್ಯಕ್ರಮದ ವಿವರಣೆ:**

ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ವರ್ಗಕ್ಕೆ ಸೇರಿದ ಕೊಳಚೆ ಪ್ರದೇಶಗಳು/ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಾಲೋನಿಗಳಲ್ಲಿ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅಸಂಘಟಿತ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಮಹಿಳೆಯರಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸ್ತ್ರೀ ಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದ ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸ್ವಂತ ಉದ್ಯೋಗಕ್ಕಾಗಿ ಎನ್.ಎಸ್.ಸಿ.ಎಫ್.ಡಿ.ಸಿ/ಮಹಿಳಾ ಅಭಿವೃದ್ಧಿ ನಿಗಮ/ಡಿ.ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಪರಿಶಿಷ್ಠ ಪಂಗಡದ ಅಭಿವೃದ್ಧಿ ನಿಗಮ ನಿಯಮಿತ/ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಇತರೆ ಸಂಬಂಧಪಟ್ಟ ಅಭಿವೃದ್ಧಿ ನಿಗಮಗಳಿಂದ ಸಾಲ ಮಂಜೂರಾದ ಮಹಿಳಾ ಸ್ವಸಹಾಯ ಸಂಸ್ಥೆಗಳಿಗೆ ರೂ.10,000/– ರಿಂದ ರೂ.20,000/–ಗಳ ಸಹಾಯ ಧನವನ್ನು ಬಿಡುಗಡೆ ಮಾಡಲಾಗುವುದು.

**(vii) ಅರ್ಹತೆಗಳು:**

h. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

i. ಈ ಯೋಜನೆಗೆ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

j. ಸ್ವಸಹಾಯ ಸಂಘವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು.

k. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರು ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.

l. ಅರ್ಜಿದಾರರು ಇತ್ತೀಚಿನ 5 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

m. **ವಾರ್ಷಿಕ ಆದಾಯದ ಮಿತಿ:**

1. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ವಾರ್ಷಿಕ ಆದಾಯ ಮಿತಿ ಇರುವುದಿಲ್ಲ.
2. ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ರೂ.1,00,000/– (ಒಂದು ಲಕ್ಷ ರೂ.) ಗಳ ವಾರ್ಷಿಕ ಆಧಾಯ ಮಿತಿಯನ್ನು ನಿಗದಿ ಪಡಿಸಲಾಗಿದೆ.

3. ಅಲ್ಪ ಸಂಖ್ಯಾತರಿಗೆ ವಾರ್ಷಿಕ ಆದಾಯ ರೂ.2,00,000/- (ಎರಡು ಲಕ್ಷ ರೂ.) ಗಳ ವಾರ್ಷಿಕ ಆಧಾಯ ಮಿತಿಯನ್ನು ನಿಗದಿ ಪಡಿಸಲಾಗಿದೆ.

n. ವಯೋಮಿತಿ–ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ–18 ರಿಂದ 40 ವರ್ಷಗಳು.
ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗ–18 ರಿಂದ 35 ವರ್ಷಗಳು

o. ಈ ಯೋಜನೆಯ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಹಿಂದೆ ಯಾವುದೇ ಸರ್ಕಾರ/ ಸರ್ಕಾರೇತರ ಸಂಸ್ಥೆಗಳು ಹಾಗೂ ನಿಗಮಗಳಿಂದ ಸಹಾಯ ಧನವನ್ನು / ಸವಲತ್ತುಗಳನ್ನು ಪಡೆದಿರಬಾರದು. (ಈ ಬಗ್ಗೆ ರೂ.20/–ಗಳ ಛಾಪಾಕಾಗದದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು)

p. ಸಂಬಂಧಪಟ್ಟ ನಿಗಮಗಳಿಂದ ಸಾಲ ಮಂಜೂರಾದ ನಂತರ ಫಲಾನುಭವಿಗಳಿಗೆ ಸಹಾಯ ಧನ ಗರಿಷ್ಠ ರೂ.20,000/–ಗಳನ್ನು ಸ್ತ್ರೀ ಶಕ್ತಿ ಸಂಘಗಳಿಗೆ ಬಿಡುಗಡೆ ಮಾಡಲಾಗುವುದು.

q. ಸಹಾಯ ಧನ ಪಡೆದ ಫಲಾನುಭವಿಗಳು ಸಾಲವನ್ನು ಮರುಪಾವತಿ ಮಾಡುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು.

**(viii) <u>ಆಯ್ಕೆ ವಿದಾನ:</u>**

a. ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗುವುದು.

b. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ವರ್ಗಕ್ಕೆ ಸೇರಿದ ಕೊಳಚೆ ಪ್ರದೇಶಗಳು/ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಾಲೋನಿಗಳಲ್ಲಿ ರಚಿಸಿರುವ ಸ್ವಸಹಾಯ ಸಂಘಗಳ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

c. ಈ ಕೆಳಕಂಡ ಹಿರಿಯ ಅಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಖಾಂತರ ಫಲಾನುಭವಿಗಳನ್ನು ಗುರುತಿಸುವುದು.

| | | | |
|---|---|---|---|
| **1.** | **ವಲಯ ಅಪರ/ಜಂಟಿ ಆಯುಕ್ತರು** | – | **ಅಧ್ಯಕ್ಷರು** |
| **2.** | **ವಲಯ ಉಪ ಆಯುಕ್ತರು** | – | **ಉಪಾಧ್ಯಕ್ಷರು** |
| **3.** | **ಕೇಂದ್ರ ಕಛೇರಿಯ ಒಬ್ಬರು ಪ್ರತಿ ನಿಧಿ** | – | **ಸದಸ್ಯರು** |
| **4.** | **ಸಾಲ ಮಂಜೂರು ಮಾಡಿದ ನಿಗಮದ ಪ್ರತಿ ನಿಧಿ** | – | **ಸದಸ್ಯರು** |
| **5.** | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರತಿನಿಧಿ** | – | **ಸದಸ್ಯರು** |
| **6.** | **ವಲಯ ಕಲ್ಯಾಣಾಧಿಕಾರಿ** | – | **ಸದಸ್ಯರು** |
| **7.** | **ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು** | – | **ಸದಸ್ಯ ಕಾರ್ಯದರ್ಶಿ** |

d. ಆಯ್ಕೆ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

e. ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆಪಟ್ಟಿ (ಶೇ.10 ರಷ್ಟು)ನ್ನು ಕಾಯ್ದುಕೊಳ್ಳುವುದು.

f. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

*ವಿಶೇಷ ಆಯುಕ್ತರು (ಆಡಳಿತ)*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಅಂಗನವಾಡಿ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ (ಮಹಿಳಾ ಕಲ್ಯಾಣ)– ಮಾರ್ಗಸೂಚಿಗಳು

## Improvements & Maintenance to Anganawadi Centres Scheme-Guidelines

### (ix) ಕಾರ್ಯಕ್ರಮದ ಉದ್ದೇಶ:

ಕರ್ನಾಟಕ ಸರ್ಕಾರದಿಂದ ನಡೆಸಲಾಗುತ್ತಿರುವ ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವ ಸ್ಥಳಗಳಲ್ಲಿ ಪಾಲಿಕೆಯಿಂದ ಈ ಕೇಂದ್ರಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಅನುದಾನವನ್ನು ನೀಡಲಾಗುವುದು.

### (x) ಕಾರ್ಯಕ್ರಮದ ವಿವರಣೆ:

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗನವಾಡಿ ಕೇಂದ್ರಗಳಿಗೆ ಅವಶ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳು, ಸಾಧನಗಳು, ಸಲಕರಣೆಗಳು ಹಾಗೂ ಇತ್ಯಾದಿಗಳ ಕುರಿತು ಪ್ರಸ್ತಾವನೆಗಳನ್ನು ಪಾಲಿಕೆಯ ವಲಯ ಕಛೇರಿಗಳಿಗೆ ಸಲ್ಲಿಸಿದ ನಂತರ ಸಂಬಂಧಪಟ್ಟ ವಲಯದ ಕಲ್ಯಾಣಾಧಿಕಾರಿಗಳು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಜಂಟಿಯಾಗಿ ಪರಿಶೀಲಿಸಿ ವರದಿಯನ್ನು ನೀಡಿದ ನಂತರ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

### (xi) ಅರ್ಹತೆಗಳು:

r. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂಗನವಾಡಿ ಕೇಂದ್ರಗಳು ಇರಬೇಕು.

s. ಈ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪ್ರಸ್ತಾವನೆಯನ್ನು ಅಂದಾಜು ವೆಚ್ಚದ ವಿವರ ಹಾಗೂ ನೀಲಿ ನಕ್ಷೆಯ ವಿವರಗಳನ್ನು ಸಲ್ಲಿಸತಕ್ಕದ್ದು.

t. ಈ ರೀತಿಯಲ್ಲಿ ಸಲ್ಲಿಸಿರುವ ಪ್ರಸ್ಥಾವನೆಯಲ್ಲಿ ಇದೇ ಉದ್ದೇಶಕ್ಕಾಗಿ ಇತರೆ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಿಂದ ಅನುದಾನವನ್ನು ಪಡೆದಿರುವುದಿಲ್ಲವೆಂದು ದೃಢೀಕರಣ ಪತ್ರವನ್ನು ನೀಡಬೇಕು.

u. ಅಂಗನವಾಡಿ ಕೇಂದ್ರಗಳ ಮೂಲಭೂತ ಸೌಕರ್ಯ/ಸೌಲಭ್ಯಗಳಿಗೆ ಮೊದಲ ಆದ್ಯತೆ.

### (xii) ಅನುದಾನದ ಬಿಡುಗಡೆಯ ವಿಧಾನಗಳು:

g. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖ್ಯಸ್ಥರಿಂದ ಪ್ರಸ್ತಾವನೆ, ಅಂದಾಜು ವೆಚ್ಚ, ನಕ್ಷೆಗಳು ಹಾಗೂ ಇತ್ಯಾದಿಗಳನ್ನು ಸಲ್ಲಿಸಿರುವ ಆಧಾರಗಳ ಮೇಲೆ ವಲಯದ ಅಭಿಯಂತರರುಗಳು, ಕಲ್ಯಾಣಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ವರದಿ ಸಲ್ಲಿಸುವುದು.

h. ವಲಯ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆಗಳ ಹಾಗೂ ಅದರ ಸ್ಥಿತಿಗತಿಗಳ ಅನುಗುಣವಾಗಿ ಅನುದಾನವನ್ನು ಸೀಮಿತಗೊಳಿಸಿ ಅಪರ/ಜಂಟಿ ಆಯುಕ್ತರುಗಳ ಅನುಮೋದನೆ ಪಡೆದು ಅನುದಾನವನ್ನು ಬಿಡುಗಡೆ ಮಾಡುವುದು.

i. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಪ್ರಾಧಿಕಾರದವರಿಂದ ಅನುದಾನದ ಬಳಕೆಯ ಬಗ್ಗೆ ಉಪಯುಕ್ತತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.

***ವಿಶೇಷ ಆಯುಕ್ತರು (ಆಡಳಿತ)***
***ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ***

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಮಹಿಳಾ ಕಲ್ಯಾಣ ಅಡಿಯಲ್ಲಿ  ಕಾರ್ಯಕ್ರಮಗಳು-ಕ್ರಿಯಾಯೋಜನೆ

### ಶೃಂಗಾರ/ ಗೃಹ ನಿರ್ವಹಣೆ ತರಬೇತಿ

**ಕಾರ್ಯಕ್ರಮದ ಉದ್ದೇಶ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಮಹಿಳಾ ಕಲ್ಯಾಣ ಯೋಜನೆಯಡಿಯಲ್ಲಿ ಶೃಂಗಾರ/ ಗೃಹಪಯೋಗಿ ಸಾಮಗ್ರಿ ಮತ್ತು ಮೊಬೈಲ್ ಫೋನ್ ರಿಪೇರಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದಲ್ಲಿ ಉಚಿತವಾಗಿ ಶೃಂಗಾರ ತರಬೇತಿ ಮತ್ತು ಗೃಹಪಯೋಗಿ ಸಾಮಗ್ರಿ ಮೊಬೈಲ್ ಫೋನ್ ರಿಪೇರಿ ತರಬೇತಿ ನೀಡಿ ಹಿಂದುಳಿದ ಅಲ್ಪಸಂಖ್ಯಾತ ವರ್ಗದ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಉಚಿತವಾಗಿ ತರಬೇತಿಯನ್ನು ನೀಡಲಾಗುವುದು.

ಸದರಿ ಕಾರ್ಯಕ್ರಮದಲ್ಲಿ ಉಚಿತ ಶೃಂಗಾರ/ ಗೃಹಪಯೋಗಿ ಸಾಮಗ್ರಿ ಮತ್ತು ಮೊಬೈಲ್ ಫೋನ್ ರಿಪೇರಿ ತರಬೇತಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆ ಇದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ತರಬೇತಿ ಪಡೆಯಲು  ಅರ್ಹರಾಗಿರುತ್ತಾರೆ.

**ಅರ್ಹತೆಗಳು:**

1) ಈ ಯೋಜನೆಯು ಮಹಿಳೆಯರಿಗೆ ಮಾತ್ರ.
2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).
3) ಈ ಕಾರ್ಯಕ್ರಮದಲ್ಲಿ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ವಯಸ್ಸು 18ರಿಂದ 35 ವರ್ಷಗಳಾಗಿರಬೇಕು.
4) ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಫೇಲ್/ಪಾಸ್ ಆಗಿರಬೇಕು.
5) ನಿರ್ಗತಿಕ ವಿಧವೆಯರಿಗೆ ಆಧ್ಯತೆ ನೀಡಬೇಕು.
6) ಅಭ್ಯರ್ಥಿಯು ಆಯ್ಕೆಯಾದ ನಂತರ 20-00 ರೂ. ಛಾಪಾ ಕಾಗದದಲ್ಲಿ ತರಬೇತಿಯ ಮಧ್ಯದಲ್ಲಿ ಬಿಟ್ಟು ಹೋಗುವುದಿಲ್ಲವೆಂದೂ, ಒಂದು ವೇಳೆ ಬಿಟ್ಟು ಹೋದಲ್ಲಿ ವೆಚ್ಚವನ್ನು ಭರಿಸಿ ಕೊಡುವುದಾಗಿ ಒಪ್ಪಿರುತ್ತೇನೆಂದು ಮುಚ್ಚಳಿಕೆ ಪತ್ರ ನೀಡಬೇಕು.
7) ಅಭ್ಯರ್ಥಿಯ ವಾರ್ಷಿಕ ಆದಾಯ ಮಿತಿ ಹಿಂದುಳಿದವರಿಗೆ ರೂ.22,000 ಅಲ್ಪಸಂಖ್ಯಾತ ವರ್ಗದವರಿಗೆ ರೂ. 2 ಲಕ್ಷ ಆಗಿರಬೇಕು ಮತ್ತು ಪ.ಜಾ/ಪ.ಪಂ.ದವರಿಗೆ ಆದಾಯ ಮಿತಿ ರೂ. 1ಲಕ್ಷ ಗಳಾಗಿರಬೇಕು.
8) ಪ.ಜಾ/ಪ.ಪಂ. ಅಭ್ಯರ್ಥಿಗಳಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಹಾಗೂ ಚಾಲ್ತಿ ವರ್ಷದೊಳಗಿನ ಆದಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು,
9) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಸಿಲ್ದಾರ್ ರವರಿಂದ ಪಡೆದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
10) ಉಚಿತ ಶೃಂಗಾರ/ ಗೃಹಪಯೋಗಿ ಸಾಮಗ್ರಿ ಮತ್ತು ಮೊಬೈಲ್ ಫೋನ್ ರಿಪೇರಿ

ತರಬೇತಿಗೆ ಅರ್ಜಿಸಲ್ಲಿಸಿದ ಅಭ್ಯರ್ಥಿಗಳು ಆಯಾಯ ತರಬೇತಿಗೆ ಮಾತ್ರ ಅಭ್ಯರ್ಥಿಗಳನ್ನು ಪರಿಗಣಿಸತಕ್ಕದ್ದು.

ಅರ್ಜಿದಾರರು 5 ಬಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.

**ಇ. ಆಯ್ಕೆ ವಿಧಾನ:**

a. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಕಛೇರಿಯಿಂದ ಶೃಂಗಾರ/ ಗೃಹಪಯೋಗಿ ಸಾಮಗ್ರಿ ಮತ್ತು ಮೊಬೈಲ್ ಫೋನ್ ರಿಪೇರಿ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

b. ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

c. ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

**i. ವಲಯ ಜಂಟಿ ಆಯುಕ್ತರು –ಅಧ್ಯಕ್ಷರು**
**ii. ವಲಯ ಉಪ ಆಯುಕ್ತರು –ಉಪಾಧ್ಯಕ್ಷರು**
**iii. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿ ನಿಧಿ –ಸದಸ್ಯರು**
**iv. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು –ಸದಸ್ಯ ಕಾರ್ಯದರ್ಶಿ**

d. ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅಂಗವಿಕಲರಿಗೆ ಆದ್ಯತೆಯನ್ನು ನೀಡುವುದು.

e. ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

f. ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

g. ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಕಾಯ್ದುಕೊಳ್ಳುವುದು.

h. ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆಧಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**ಈ. ತರಬೇತಿಯ ವಿವರಗಳು:**

a. ಅಭ್ಯರ್ಥಿಯು ಶೇ.90ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.

b. ಅಭ್ಯರ್ಥಿಯು ತರಬೇತಿ ನೀಡುವ ಸಂಸ್ಥೆಯು, ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

c. ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

**ಉ. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸಬೇಕು.**

**(ಸಹಿ/–)**
**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆ ಚಟುವಟಿಕೆಗಳು

## ಮಹಿಳಾ ಕಲ್ಯಾಣ ಕಾರ್ಯಕ್ರಮಗಳು

### ನಿರ್ಗತಿಕ, ನೊಂದ, ದುರ್ಬಲ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಮಹಿಳಾ ಸಹಾಯ ಹಸ್ತ ಕೇಂದ್ರಗಳನ್ನು ಪ್ರಾರಂಭಿಸಲು (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ)– ಮಾರ್ಗಸೂಚಿಗಳು

### Help Centres for Destitute, Abused & Oppressed Women (through NGOs)

**I. ಕಾರ್ಯಕ್ರಮದ ಉದ್ದೇಶ:–**

ಶೋಷಣೆಗೆ ಒಳಪಟ್ಟ ಮಹಿಳೆಯರು ಪರಿತ್ಯಕ್ತರು ವೈವಾಹಿಕ ಜೀವನದಲ್ಲಿ ತೊಂದರೆಗೆ ಒಳಪಟ್ಟವರು ಹಾಗೂ ರಕ್ಷಣೆ ಅಗತ್ಯವಿರುವ ಮಹಿಳೆಯರು ಮತ್ತು ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ಆರೈಕೆ, ರಕ್ಷಣೆ ಮಾರ್ಗದರ್ಶನ ತರಬೇತಿ ವ್ಯಕ್ತಿತ್ವವಿಕಸನ ಇತ್ಯಾದಿಗಳಿಂದ ಆರ್ಥಿಕ ಹಾಗೂ ಸಾಮಾಜಿಕ ಜೀವನವನ್ನು ಉತ್ತಮಪಡಿಸಿ ಪುನರ್ವಸತಿಗೊಳಿಸುವುದು. ಈ ಸಂಬಂಧ ಸರ್ಕಾರಿ/ಅರೆಸರ್ಕಾರಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ಸಹಾಯಹಸ್ತ ಕೇಂದ್ರಗಳನ್ನು ಸ್ಥಾಪಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

**II. ಕಾರ್ಯಕ್ರಮದ ವಿವರಣೆ:–**

ಮಹಿಳೆಯರಿಗೆ ತಕ್ಷಣದಲ್ಲಿ ಉಂಟಾಗುವ ಆಪತ್ತು, ಗಂಡಾಂತರ, ದೌರ್ಜನ್ಯ ಹಾಗೂ ಶೋಷಣೆಯಿಂದ ರಕ್ಷಣೆ ನೀಡಿ ಇದರಿಂದ ಮಹಿಳೆಯರಲ್ಲಿ ಉಂಟಾಗುವ ಮಾನಸಿಕ ಆಘಾತಗಳಿಗೆ ಸಾಂತ್ವನ ನೀಡಿ ನೊಂದ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಮಹಿಳೆಯರಿಗೆ ವ್ಯಕ್ತಿವಿಕಸನ, ಮಾರ್ಗದರ್ಶನ, ಸಾಮಾಜಿಕ ಭದ್ರತೆ, ಸಾಮಾಜಿಕ ಹೊಂದಾಣಿಕೆ ಮತ್ತು ಪುನರ್ವಸತಿಯನ್ನು ಸಮರ್ಪಕವಾಗಿ ಸ್ವಯಂ ಸೇವಾಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**III. ಅರ್ಹತೆಗಳು:–**

1. ಕಾರ್ಯಕ್ರಮದ ಪ್ರಯೋಜನ ಪಡೆಯುವ ಅರ್ಜಿದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು ಅಥವಾ ಹಾಲಿ ಚುನಾಯಿತ ಜನಪ್ರತಿನಿಧಿಗಳ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರವನ್ನು ಸಲ್ಲಿಸಬೇಕು.
2. ಆರ್ಥಿಕವಾಗಿ ಸದೃಢವಾಗಿರುವ ಎಲ್ಲಾ ಮೂಲಭೂತ ಸೌಕರ್ಯ, ಅನುಕೂಲತೆ/ಸಂಪನ್ಮೂಲ ಅನುಭವ ಹಾಗೂ ಯಾವ ಉದ್ದೇಶಕ್ಕಾಗಿ ಅನುದಾನ ಪಡೆದಿರುವುದೂ ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವಂತ ಸಿಬಂದ್ದಿಯನ್ನು ಹೊಂದಿರಬೇಕು.
3. ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ನೊಂದ, ನಿರ್ಗತಿಕ, ಪರಿತ್ಯಕ್ತ, ಸಂಕಷ್ಟದಲ್ಲಿರುವ ಹಾಗೂ ಶೋಷಣೆಗೊಳಗಾದ ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡು ಈ ಕ್ಷೇತ್ರದಲ್ಲಿ ನುರಿತ ಅನುಭವಿ ಕ್ಷೇತ್ರವನ್ನು ಆಯ್ಕೆ ಮಾಡುವುದು.

2ನೇ ಪುಟಕ್ಕೆ ----

4. ಮಹಿಳೆಯರಿಗೆ ಕಾನೂನು ರಕ್ಷಣೆ, ಆಶ್ರಯ, ಸಾಂತ್ವಾನ, ಆರೋಗ್ಯರಕ್ಷಣೆ, ನೀಡುವುದರ ಜೊತೆಗೆ ಜೀವನಾಧಾರ ಕರಕುಶಲ ವೃತ್ತಿಗಳ ಬಗ್ಗೆ ತರಬೇತಿ ನೀಡಲು ಕಟ್ಟುಬದ್ದವಾಗಿರುವ ಸಂಸ್ಥೆಯಾಗಿರಬೇಕು.
5. ಅರ್ಜಿದಾರರು ಇತ್ತೀಚಿನ 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು.
6. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## IV) ಆಯ್ಕೆ ವಿಧಾನ:–

1. ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗುವುದು.
2. ಸ್ವಯಂ ಸೇವಾ ಸಂಸ್ಥೆಗಳನ್ನು ಆಯ್ಕೆ ಮಾಡುವಾಗ ಕರ್ನಾಟಕ ಪಾರದರ್ಶಕ ಅಧಿನಿಯಮದಡಿ ಸೇವೆಯನ್ನು ನೀಡುವ ಸಂಸ್ಥೆಗಳನ್ನು ಕಟ್ಟುಬದ್ದವಾಗಿ ಟೆಂಡರ್ ಪ್ರಕ್ರಿಯೆಮಾಡಿ ಪರಿಣಿತ ಸೇವಾ ನಿರತ ಸ್ವಯಂ ಸೇವಾಸಂಸ್ಥೆಯನ್ನು ಟೆಂಡರ್ ಮೂಲಕ ಆಯ್ಕೆ ಮಾಡುವುದು.
3. ಸ್ವಯಂ ಸೇವಾ ಸಂಸ್ಥೆಯು ಕರ್ನಾಟಕ/ಭಾರತ ಸರ್ಕಾರದಿಂದ ಅಂಗೀಕೃತ ಸಂಸ್ಥೆಯಾಗಿರಬೇಕು. ಪ್ರಸಕ್ತ ಸಾಲಿಗೆ ನವೀಕರಿಸಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೇಂದ್ರವನ್ನು ಹೊಂದಿರಬೇಕು.
5. ಸ್ವಯಂ ಸೇವಾ ಸಂಸ್ಥೆಯು ಪಾಲಿಕೆಯ ವ್ಯಾಪ್ತಿಯಲ್ಲಿ ನೊಂದ ನಿರ್ಗತಿಕ ಮಹಿಳೆಯರಿಗಾಗಿ ಸೇವೆ ಸಲ್ಲಿಸುತ್ತಿರಬೇಕು.
6. ಈ ಕೆಳಕಂಡ ಹಿರಿಯ ಅಧಿಕಾರಿಗಳನ್ನೊಳಗೊಂಡ ಟೆಂಡರ್ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಮುಖಾಂತರ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸುವುದು.

| | | |
|---|---|---|
| **1. ವಲಯ ಅಪರ/ಜಂಟಿ ಆಯುಕ್ತರು** | **–** | **ಅಧ್ಯಕ್ಷರು** |
| **2. ವಲಯ ಉಪ ಆಯುಕ್ತರು** | **–** | **ಉಪಾಧ್ಯಕ್ಷರು** |
| **3. ಕೇಂದ್ರ ಕಛೇರಿಯ ಒಬ್ಬರು ಪ್ರತಿ ನಿಧಿ** | **–** | **ಸದಸ್ಯರು** |
| **4. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು** | **–** | **ಸದಸ್ಯರು** |
| **5. ವಲಯ ಸಹಾಯಕ ನಿಯಂತ್ರಕರು (ಹಣಕಾಸು)** | **–** | **ಸದಸ್ಯರು** |
| **6. ವಲಯ ಸಹಾಯಕ ಕಲ್ಯಾಣಾಧಿಕಾರಿ** | **–** | **ಸದಸ್ಯ ಕಾರ್ಯದರ್ಶಿ** |

7. ಆಯ್ಕೆ ಸಮಿತಿಯಿಂದ ಸ್ವಯಂ ಸೇವಾ ಸಂಸ್ಥೆಯ ಆಯ್ಕೆಯನ್ನು ಪೂರ್ಣಗೊಳಿಸುವುದು.

## V) ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## ಮಹಿಳಾ ಕಲ್ಯಾಣ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳು

## <u>ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ ಹಾಗೂ ಕಾಯರ್ ತರಬೇತಿ ಕಾರ್ಯಕ್ರಮಗಳ – ಮಾರ್ಗಸೂಚಿಗಳು</u>
## <u>Tailoring/Knitting/Embroidery and Coir Training Programme</u>

### <u>A.ಕಾರ್ಯಕ್ರಮದ ಉದ್ದೇಶ:</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಶೇ.18ರ ಮತ್ತು ಮಹಿಳಾ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಲಾಗಿದ್ದು, ಸದರಿ ವರ್ಗದವರ ಅಭಿವೃದ್ಧಿಗಾಗಿ ರೂಪಿತವಾದ ಯೋಜನೆ ಇದಾಗಿದೆ.

### <u>B. ಕಾರ್ಯಕ್ರಮದ ವಿವರಣೆ:–</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಕಲ್ಯಾಣ ಯೋಜನೆಯಡಿಯಲ್ಲಿ ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್ ತರಬೇತಿ ಕಾರ್ಯಕ್ರಮವು ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಮಹಿಳೆಯ ಬದುಕಿಗೆ ಆಶಾಕಿರಣವಾಗಿದ್ದು, ಮಹಿಳೆಯ ಬದುಕಿಗೆ ಜೀವನಾಧಾರ ಯೋಜನೆಯಾಗಿದ್ದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗಾಗಿ ಚಾಲ್ತಿಯಲ್ಲಿರುವ ಈ ಯೋಜನೆಯು ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿ ಮಾತ್ರ ಅನುಷ್ಠಾನಗೊಳ್ಳುತ್ತಿದ್ದು, ಪಾಲಿಕೆಯ ಪ್ರತಿ ವಾರ್ಡ್‌ಗೆ ಎರಡರಂತೆ ಹೊಲಿಗೆ ಕೇಂದ್ರಗಳು ಇದ್ದು ಹಾಗೂ ಪ್ರತಿ ವಾರ್ಡ್‌ಗೆ ಒಂದು ನಿಟ್ಟಿಂಗ್/ಎಂಬ್ರಾಯಿಡರಿ ಕೇಂದ್ರ ಮತ್ತು ವಾರ್ಡ್ ನಂ.82–ಹೊಯ್ಸಳನಗರದಲ್ಲಿ ಮಾತ್ರ ಒಂದು ಕಾಯರ್ ತರಬೇತಿ ಕೇಂದ್ರ ಇರುತ್ತದೆ. ಸದರಿ ಕೇಂದ್ರಗಳಲ್ಲಿ ಗೌರವಧನ ಆಧಾರಿತ ಶಿಕ್ಷಕಿಯರು ಮತ್ತು ಮೇಲ್ವಿಚಾರಕರು ಹಾಗೂ ದುರಸ್ತಿಗಾರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

### <u>C. ಅರ್ಹತೆಗಳು:</u>

a. ಈ ಕಾರ್ಯಕ್ರಮದ ಯೋಜನೆಯು ಮಹಿಳೆಯರಿಗೆ ಮಾತ್ರ ಸೀಮಿತವಾಗಿರುತ್ತದೆ.
b. ಅಭ್ಯರ್ಥಿಗಳಿಗೆ ಯಾವುದೇ ವಯಸ್ಸಿನ ಹಾಗೂ ವಿದ್ಯಾರ್ಹತೆ ನಿರ್ಬಂಧನೆ ಇರುವುದಿಲ್ಲ.
c. ವಿಧವೆ/ಪರಿತ್ಯಕ್ತ/ಅಂಗವಿಕಲ/ನಿರ್ಗತಿಕ ಮಹಿಳೆಯರಿಗೆ ಮೊದಲ ಆದ್ಯತೆ ನೀಡುವುದು.
d. ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
e. ಅಭ್ಯರ್ಥಿಯ ವಾರ್ಷಿಕ ಆದಾಯ ಮಿತಿ ಹಿಂದುಳಿದವರಿಗೆ ರೂ.1.00 ಲಕ್ಷ, ಅಲ್ಪಸಂಖ್ಯಾತ ವರ್ಗದರಿಗೆ ರೂ.2.00 ಲಕ್ಷಗಳಾಗಿರಬೇಕು. ಪರಿಶಿಷ್ಟ ಜಾತಿ/ಪಂಗಡದವರಿಗೆ ಆದಾಯ ಮಿತಿ ಇರುವುದಿಲ್ಲ.

**2ನೇ ಪುಟಕ್ಕೆ -----**

f. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).

g. ಉಚಿತ ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್ ತರಬೇತಿಗೆ ಅರ್ಜಿಸಲ್ಲಿಸಿದ ಅಭ್ಯರ್ಥಿಗಳನ್ನು ಆಯಾಯ ತರಬೇತಿಗೆ ಮಾತ್ರ ಪರಿಗಣಿಸತಕ್ಕದ್ದು.

h. ಅರ್ಜಿದಾರರು 2 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.

i. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## D. ತರಬೇತಿ ವಿವರಗಳು:–

a. ಹೊಲಿಗೆ ತರಬೇತಿಯು ಒಂದು ವರ್ಷದ ಪೂರ್ಣ ಅವಧಿಯ ತರಬೇತಿಯಾಗಿದ್ದು, ನಿಗಧಿಪಡಿಸಿದ ಪಠ್ಯದ ವಿಷಯಗಳಲ್ಲಿ ತರಬೇತಿ ನೀಡುವುದು. ಒಂದು ಕೇಂದ್ರದಲ್ಲಿ ಗರಿಷ್ಠ 40 ಶಿಕ್ಷಣಾರ್ಥಿಗಳು ತರಬೇತಿ ಪಡೆಯುವ ಅವಕಾಶವಿರುತ್ತದೆ.

b. ಹೊಲಿಗೆ ತರಬೇತಿ ಕೇಂದ್ರಗಳಲ್ಲಿ 12 ತಿಂಗಳ ತರಬೇತಿ ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ.ಜಾ/ಪ.ಪಂ.ದ ಅಭ್ಯರ್ಥಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರ ಮತ್ತು ಮಾಸಿಕ ರೂ.100.00 ಗಳಂತೆ ವಾರ್ಷಿಕ ರೂ.1200/–ಗಳ ಶಿಷ್ಯವೇತನ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುವುದು.

c. ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ಹೊಲಿಗೆ ತರಬೇತಿ ಪಡೆದು ಉತ್ತೀರ್ಣರಾದ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರವನ್ನು ಮಾತ್ರ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುವುದು.

d. ನಿಟ್ಟಿಂಗ್/ಎಂಬ್ರಾಯಿಡರಿ ತರಬೇತಿಯು 6 ತಿಂಗಳ ಅವಧಿಯ ತರಬೇತಿಯಾಗಿದ್ದು, ನಿಗಧಿಪಡಿಸಿದ ಪಠ್ಯದ ವಿಷಯಗಳಲ್ಲಿ ತರಬೇತಿ ನೀಡುವುದು. ಪ್ರತಿ ಕೇಂದ್ರಕ್ಕೆ ಗರಿಷ್ಠ 30 ಶಿಕ್ಷಣಾರ್ಥಿಗಳು ತರಬೇತಿ ಪಡೆಯುವ ಅವಕಾಶವಿರುತ್ತದೆ.

e. ನಿಟ್ಟಿಂಗ್/ಎಂಬ್ರಾಯಿಡರಿ ತರಬೇತಿ ಕೇಂದ್ರದಲ್ಲಿ 6 ತಿಂಗಳ ತರಬೇತಿ ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ.ಜಾ/ಪ.ಪಂ ಮತ್ತು ಹಿಂ.ಅ.ಸಂ. ವರ್ಗದವರಿಗೆ ಮಾಸಿಕ ರೂ.100.00 ಗಳಂತೆ ಒಟ್ಟು ರೂ.600/–ಗಳ ಶಿಷ್ಯವೇತನ ಹಾಗೂ ಪ್ರಮಾಣ ಪತ್ರವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೀಡಲಾಗುವುದು.

f. ಕಾಯರ್ ತರಬೇತಿಯು 6 ತಿಂಗಳ ಅವಧಿಯಾಗಿದ್ದು, ನಿಗಧಿಪಡಿಸಿದ ಪಠ್ಯದ ವಿಷಯಗಳಲ್ಲಿ ತರಬೇತಿ ನೀಡುವುದು. ತರಬೇತಿಗೆ ಗರಿಷ್ಠ 30 ಜನ ಶಿಕ್ಷಣಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವುದು. ತರಬೇತಿ ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ.ಜಾ/ಪ.ಪಂ ಮತ್ತು ಹಿಂ.ಅ.ಸಂ. ವರ್ಗದ ಅಭ್ಯರ್ಥಿಗಳಿಗೆ ಮಾಸಿಕ ರೂ.350/– ಗಳಂತೆ 6 ತಿಂಗಳ ಅವಧಿಗೆ ರೂ.2,100/–ರಂತೆ ಶಿಷ್ಯವೇತನವನ್ನು ನೀಡಲಾಗುವುದು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರಮಾಣ ಪತ್ರವನ್ನು ನೀಡಲಾಗುವುದು.

**3ನೇ ಪುಟಕ್ಕೆ ––––**

g. ಅಭ್ಯರ್ಥಿಯು ಶೇ.90ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು. ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

h. ಅಭ್ಯರ್ಥಿಯು ತರಬೇತಿಗೆ ಆಯ್ಕೆಯಾದ ನಂತರ ಪೂರ್ಣಾವಧಿಯ ತರಬೇತಿಯನ್ನು ಪಾಲಿಕೆಯ ನೀತಿ ನಿಯಮಗಳಿಗೆ ಒಳಪಟ್ಟು ಪಡೆಯುವ ಬಗ್ಗೆ ಮತ್ತು ತರಬೇತಿ ಅವಧಿಯಲ್ಲಿ ತರಬೇತಿಯನ್ನು ಪೂರ್ಣಗೊಳಿಸುವ ಬಗ್ಗೆ ಬಿಳಿ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಬರೆದು ಕೊಡಬೇಕು.

i. ತರಬೇತಿ ಮುಗಿದು, ಪ್ರಮಾಣ ಪತ್ರಗಳನ್ನು ನೀಡಿದ ನಂತರವೇ ಶಿಷ್ಯವೇತನ ಮತ್ತು ಹೊಲಿಗೆ ಯಂತ್ರಗಳನ್ನು ವಿತರಿಸುವುದು.

j. ತರಬೇತಿ ಸ್ಥಳ, ವೇಳೆ, ಅವಧಿ, ಮುಂತಾದವು ಆಯಾ ವಲಯ ಅಪರ/ಜಂಟಿ ಆಯುಕ್ತರ ನಿರ್ದೇಶನಗಳಂತೆ ಇರುತ್ತದೆ.

## <u>E. ಆಯ್ಕೆ ವಿಧಾನ:–</u>

a. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾಯ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳ ಕಲ್ಯಾಣ ಶಾಖೆಯಿಂದ ಹೊಲಿಗೆ/ನಿಟ್ಟಿಂಗ್/ ಎಂಬ್ರಾಯಿಡರಿ/ಕಾಯರ್ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

b. ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

c. ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1) ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2) ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3) ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿನಿಧಿ | – | ಸದಸ್ಯರು |
| 4) ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

d. ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಶೇ.3ರಷ್ಟು ಮೀಸಲಾತಿಯನ್ವಯ ಅಂಗವಿಕಲರಿಗೆ ಆದ್ಯತೆಯನ್ನು ನೀಡುವುದು.

e. ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

f. ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

g. ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಕಾಯ್ದುಕೊಳ್ಳುವುದು.

**4ನೇ ಪುಟಕ್ಕೆ ––––**

h. ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆಧಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

## **F.** ಕಾರ್ಯ ವಿಧಾನ ಹಾಗೂ ಉಚಿತ ಹೊಲಿಗೆ ಯಂತ್ರಗಳನ್ನು ವಿತರಿಸುವ ಬಗ್ಗೆ.

1) ತರಬೇತಿ ಮುಗಿದ ನಂತರ ಹೊಲಿಗೆ ತರಬೇತಿಯ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಹೊಲಿಗೆ ಯಂತ್ರಗಳನ್ನು ವಿತರಿಸುವುದು. ಸದರಿ ಹೊಲಿಗೆ ಯಂತ್ರಗಳನ್ನು ಖರೀದಿಸಲು ವಲಯ ಮಟ್ಟದ ಟೆಂಡರ್ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ.) ಕಾಯ್ದೆಯ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು.
2) ತರಬೇತಿಯ ಪ್ರತಿ ಕೇಂದ್ರದಲ್ಲಿ ಪ್ರತಿ ವರ್ಷ ಎರಡು ತಂಡಗಳಲ್ಲಿ ಒಟ್ಟು 40 ಅಭ್ಯರ್ಥಿಗಳು ತರಬೇತಿ ಪೂರ್ಣಗೊಳಿಸುವುದರಿಂದ ಕನಿಷ್ಠ ಹತ್ತು ಸುಸ್ಥಿತಿಯ ಹೊಲಿಗೆ ಯಂತ್ರಗಳು ಹಾಗೂ 05 ನಿಟ್ಟಿಂಗ್ ಯಂತ್ರಗಳು ತರಬೇತಿ ಕೇಂದ್ರದಲ್ಲಿ ಇರತಕ್ಕದ್ದು.
3) ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಖರೀದಿಸುವಾಗ ವಲಯಕ್ಕೆ ನಿಗಧಿಪಡಿಸಿದ ಅನುದಾನಕ್ಕೆ ತಕ್ಕಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ.) ನಿಯಮಗಳನ್ವಯ ಖರೀದಿಸತಕ್ಕದ್ದು.
4) ದುರಸ್ತಿಯಲ್ಲಿರುವ ಹೊಲಿಗೆ/ನಿಟ್ಟಿಂಗ್ ಯಂತ್ರಗಳನ್ನು ಕೂಡಲೇ ದುರಸ್ತಿ ಮಾಡಿಸಿ ತರಬೇತಿಗೆ ಅನುಮಾಡಿಕೊಡುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಆರೋಗ್ಯ ಮತ್ತು ಸ್ವಚ್ಛತೆಗಾಗಿ ಮಹಿಳಾ ಪೌರಕಾರ್ಮಿಕರಿಗೆ ಆರ್ಥಿಕ ಸಹಾಯ ಧನ (ಮಹಿಳಾ ಕಲ್ಯಾಣ)–ಮಾರ್ಗಸೂಚಿಗಳು

## Health Kits to Pourakarmika Women for Health & Cleanliness-Guidelines

**(xiii) ಕಾರ್ಯಕ್ರಮದ ಉದ್ದೇಶ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ/ಹಂಗಾಮಿ/ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಪೌರಕಾರ್ಮಿಕರಿಗೆ ಆರೋಗ್ಯ ಮತ್ತು ಸ್ವಚ್ಛತೆಗಾಗಿ ಆರೋಗ್ಯ ಇಲಾಖೆಯಿಂದ ಹೆಲ್ತ್ ಕಿಟ್ಸ್ ಗಳನ್ನು ನೀಡಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**(xiv) ಕಾರ್ಯಕ್ರಮದ ವಿವರಣೆ:**

ಮಹಿಳಾ ಪೌರ ಕಾರ್ಮಿಕರುಗಳಿಗೆ ಪ್ರತಿ ಮಾಹೆಯಲ್ಲಿ ವೇತನ ಬಟವಾಡೆಯೊಂದಿಗೆ ಸ್ಯಾನಿಟರಿ ನ್ಯಾಪ್ಕಿನ್ಸ್ ಹೆಲ್ತ್ ಕಿಟ್ಸ್‌ಗಳನ್ನು ಆರೋಗ್ಯ ಇಲಾಖೆ ಕಛೇರಿಗಳಿಂದ ವಿತರಣೆ ಮಾಡಲಾಗುವುದು. ಹೆಲ್ತ್ ಕಿಟ್ಸ್‌ಗಳನ್ನು ಖರೀಧಿಸಲು ಅಗತ್ಯ ಅನುದಾನವನ್ನು ಕಲ್ಯಾಣ ಶಾಖೆಯಿಂದ ಬಿಡುಗಡೆ ಮಾಡಲಾಗುವುದು.

**(xv) ಅರ್ಹತೆಗಳು:**

v. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ/ಹಂಗಾಮಿ/ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಪೌರಕಾರ್ಮಿಕರಾಗಿರಬೇಕು.

w. ಮಹಿಳಾ ಪೌರಕಾರ್ಮಿಕರಾಗಿರುವುದಕ್ಕೆ ಗುರುತಿನ ಚೀಟಿಯ ನಕಲನ್ನು ಬಟವಾಡೆ ಅಧಿಕಾರಿಯಿಂದ ದೃಢೀಕರಿಸಿ ಆಯಾ ವಲಯ ಕಛೇರಿಗಳಿಗೆ ಸಲ್ಲಿಸುವುದು.

**(xvi) ಆಯ್ಕೆ ವಿದಾನ:**

j. ವಲಯಗಳಿಗೆ ಸಂಬಂಧಪಟ್ಟ ಆರೋಗ್ಯಾಧಿಕಾರಿಗಳು ಮಹಿಳಾ ಪೌರಕಾರ್ಮಿಕರುಗಳ ಪಟ್ಟಿಯನ್ನು ಅಪರ/ಜಂಟಿ ಆಯುಕ್ತರುಗಳ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು.

**(xvii) ಖರೀದಿಗೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.**

*ವಿಶೇಷ ಆಯುಕ್ತರು (ಆಡಳಿತ)*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

# ಕಲ್ಯಾಣ ಇಲಾಖೆ ಚಟುವಟಿಕೆಗಳು

## ಮಹಿಳಾ ಕಲ್ಯಾಣ ಕಾರ್ಯಕ್ರಮಗಳು

### ಮಹಿಳಾ ಹಕ್ಕುಗಳ ಕಾರ್ಯಗಾರ–ಮಾರ್ಗಸೂಚಿಗಳು
### Workshop On Woman Rights

**I.ಕಾರ್ಯಕ್ರಮದ ಉದ್ದೇಶ:–**

ಮಹಿಳೆಯರಿಗಾಗಿ ಚಾಲ್ತಿಯಲ್ಲಿರುವ ಸಂರಕ್ಷಣಾ ಕಾರ್ಯಕ್ರಮಗಳು ಯಾವುವು, ಮಹಿಳೆಯರ ಸಂರಕ್ಷಣೆಗಾಗಿ ರೂಪಿತವಾದ ಕಾನೂನುಗಳು ಯಾವುವು, ಅವುಗಳಿಂದ ರಕ್ಷಣೆ ಪಡೆಯುವ ಬಗ್ಗೆ ಯಾವ ಯಾವ ಸಂದರ್ಭದಲ್ಲಿ ಕಾನೂನಿನ ಮೊರೆ ಹೋಗಬಹುದು ಮತ್ತು ಮಹಿಳೆಯರ ಅಭಿವೃದ್ದಿಗಾಗಿ ರೂಪಿತವಾದ ಯೋಜನೆಗಳಾವುವು ಎಂಬುದನ್ನು ತಿಳಿಸುವ ಉದ್ದೇಶದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಮಹಿಳೆಯರಲ್ಲಿ ಅರಿವುಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಈ ಹಿನ್ನಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಕಾರ್ಯಕ್ರಮ ಕೈಗೊಳ್ಳಲಾಗುವುದು.

**II. ಕಾರ್ಯಕ್ರಮದ ವಿವರಣೆ:–**

ಮಹಿಳೆಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯವನ್ನು ತಡೆಗಟ್ಟುವ ಉದ್ದೇಶದಿಂದ ಪಾಲಿಕೆ ವತಿಯಿಂದ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೂಳ್ಳಲಾಗಿದೆ. ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸ್ವಯಂಸೇವಾ ಸಂಸ್ಥೆಯ ಸಹಯೋಗದೊಂದಿಗೆ ಮಹಿಳಾ ಹಕ್ಕುಗಳ ಬಗ್ಗೆ ತಿಳಿಸುವ ಕಾರ್ಯಗಾರವನ್ನು ಏರ್ಪಡಿಸಬೇಕಾಗುತ್ತದೆ. ಈ ಕಾರ್ಯಗಾರದಲ್ಲಿ ಮಹಿಳೆಯರ ಸಂರಕ್ಷಣೆಗಾಗಿ ಚಾಲ್ತಿಯಲ್ಲಿರುವ ಕಾಯ್ದೆಗಳಾದ ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ 1984. ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣ ಕಾಯ್ದೆ 2005. ವರದಕ್ಷಿಣೆ ನಿಷೇಧ ಕಾಯ್ದೆ 1961. ಮಹಿಳಾ ಅಸಭ್ಯ ರೂಪಣ ನಿಷೇಧ ಕಾಯ್ದೆ 1986, ಕರ್ನಾಟಕ ವಿವಾಹ ಕಾಯ್ದೆ 1976, ದೇವದಾಸಿ ನಿಷೇಧ ಕಾಯ್ದೆ 1972. ಹಿಂದು ವಾರಸು ಕಾಯ್ದೆ 2005, ವಿವಾಹಿತ ಮಹಿಳೆಯ ಆಸ್ತಿ ಹಕ್ಕು ಐ.ಪಿ.ಪಿ.ಸೆಕ್ಷನ್ 363 ರಿಂದ 373. ಕೌಟಂಬಿಕ ನ್ಯಾಯಾಲಯದ ಕಾಯ್ದೆ 1984. ಕೌಟಂಬಿಕ ಹಕ್ಕುಗಳ ಸಂರಕ್ಷಣೆ ಕಾಯ್ದೆ 1985. ಮೇಲಿನ ಕಾನೂನಿನ ಅಡಿಯಲ್ಲಿ ಕಾನೂನಿ ಸಂರಕ್ಷಣೆ ಪಡೆಯುವ ವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಮಹಿಳೆಯರ ಹಕ್ಕುಗಳನ್ನು ಸಂರಕ್ಷಣೆ ಮಾಡುವುದು ಜೊತೆಗೆ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಕಾನೂನುಗಳ ಬಗ್ಗೆಯು ಸಹ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ಈ ಬಗ್ಗೆ ಅಗತ್ಯವಿರುವ ಕಾಯ್ದೆಗಳ ಅರಿವು ಹಾಗೂ ಜಾಗೃತಿಮೂಡಿಸಲು ಎಲ್ಲಾ ವಲಯಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೂಳ್ಳಲಾಗುವುದು.

**2ನೇ ಪುಟಕ್ಕೆ –––**

**III. ಕಾರ್ಯಗಾರ ಏರ್ಪಡಿಸುವ ವಿಧಿ ವಿಧಾನಗಳು :–**

1 ಕರ್ನಾಟಕ ಪಾರದರ್ಶಕ ನಿಯಮದಡಿ, ಕಟ್ಟುಬದ್ಧವಾಗಿ ಟೆಂಡರ್ ಪ್ರಕ್ರಿಯ ಮೂಲಕ, ಕಾರ್ಯಗಾರವನ್ನು ನಡೆಸುವ ಸ್ವಯಂ ಸಂಸ್ಥೆಯನ್ನು ಆಯ್ಕೆ ಮಾಡುವುದು.

2 ಆಯ್ಕೆಯಾದ ಸ್ವಯಂ ಸಂಸ್ಥೆ ವಲಯ ಮಟ್ಟದಲ್ಲಿನ ಪ್ರತಿ ವಾರ್ಡ್‌ನಲ್ಲಿಯೂ ಸಹ ಕಾರ್ಯಗಾರವನ್ನು ನಡೆಸಲು ಬದ್ಧರಾಗಿರಬೇಕು.

3 ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ಮಹಿಳೆಯರಿಗೆ ಅದರಲ್ಲೂ ಮುಖ್ಯವಾಗಿ ನೊಂದ, ನಿರ್ಗತಿಕ ವಿದವೆ ಮಹಿಳೆಯರಿಗಾಗಿ ಕಾರ್ಯಕ್ರಮ ಏರ್ಪಡಿಸುವುದು.

4 ಪಾಲಿಕೆಯ ಕೊಳಚೆ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ಕಾರ್ಯಾಗಾರ ಏರ್ಪಡಿಸುವುದು ಸೂಕ್ತವಾಗಿರುತ್ತದೆ.

5 ಕಾರ್ಯಗಾರವನ್ನು ನಡೆಸುವ ಸ್ಥಳ, ವೇಳೆಯನ್ನು ನಿವಾಸಿಗಳ ಅನುಕೂಲ ತಕ್ಕಂತೆ ನಿಗದಿಪಡಿಸುವುದು .

6 ಸ್ಥಳೀಯ ಪ್ರದೇಶದಲ್ಲಿರುವ ಮಹಿಳೆಯರಿಗಾಗಿ ಸೇವೆ ಸಲ್ಲಿಸುತ್ತಿರುವ ನೊಂದಾಯಿತ ಸಂಸ್ಥೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಂಪರ್ಕ ಹಾಗೂ ಸಹಕಾರದಿಂದ ಕಾರ್ಯಾಗಾರವನ್ನು ಹಮ್ಮಿಕೊಳ್ಳುವುದು.

**IV) <u>ಕಾರ್ಯಗಾರ ನೀಡುವ ಸ್ವಯಂ ಸೇವಾ ಸಂಸ್ಥೆಗಳ ಆಯ್ಕೆ ವಿಧಾನ:</u>**

k. ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗುವುದು.

l. ಕಾರ್ಯಾಗಾರ ನಡೆಸುವ ಸಂಸ್ಥೆಯು ಕರ್ನಾಟಕ/ಭಾರತ ಸರ್ಕಾರದಿಂದ ಅಂಗೀಕೃತ ಸಂಸ್ಥೆಯಾಗಿರಬೇಕು. ಪ್ರಸಕ್ತ ಸಾಲಿಗೆ ನವೀಕರಿಸಿರಬೇಕು.

m. ಕಾರ್ಯಗಾರ ನಡೆಸುವ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ಕೇಂದ್ರವನ್ನು ಹೊಂದಿರಬೇಕು.

n. ಸ್ವಯಂ ಸೇವಾ ಸಂಸ್ಥೆಯು ಪಾಲಿಕೆಯ ವ್ಯಾಪ್ತಿಯಲ್ಲಿ ನೊಂದ ನಿರ್ಗತಿಕ ಮಹಿಳೆಯರಿಗಾಗಿ ಸೇವೆಸಲ್ಲಿಸುತ್ತಿರಬೇಕು.

o. ಈ ಕೆಳಕಂಡ ಹಿರಿಯ ಅಧಿಕಾರಿಗಳನ್ನೊಳಗೊಂಡ ಟೆಂಡರ್ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಮುಖಾಂತರ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸುವುದು.

| | | |
|---|---|---|
| **a. ವಲಯ ಅಪರ/ಜಂಟಿ ಆಯುಕ್ತರು** | – | **ಅಧ್ಯಕ್ಷರು** |
| **b. ವಲಯ ಉಪ ಆಯುಕ್ತರು** | – | **ಉಪಾಧ್ಯಕ್ಷರು** |
| **c. ಕೇಂದ್ರ ಕಛೇರಿಯ ಒಬ್ಬರು ಪ್ರತಿ ನಿಧಿ** | – | **ಸದಸ್ಯರು** |
| **d. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು** | – | **ಸದಸ್ಯರು** |
| **e. ವಲಯದ ಸಹಾಯಕ ನಿಯಂತ್ರಕರು (ಹಣಕಾಸು)** | – | **ಸದಸ್ಯರು** |
| **f. ವಲಯ ಸಹಾಯಕ ಕಲ್ಯಾಣಾಧಿಕಾರಿ** | – | **ಸದಸ್ಯ ಕಾರ್ಯದರ್ಶಿ** |

p. ಆಯ್ಕೆ ಸಮಿತಿಯಿಂದ ಸ್ವಯಂ ಸೇವಾ ಸಂಸ್ಥೆಯ ಆಯ್ಕೆಯನ್ನು ಪೂರ್ಣಗೊಳಿಸುವುದು.

<u>ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.</u>

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**